# ಪ್ರಕೃತಿ–ಮನಸು

'ಪ್ರಕೃತಿಯಂತೆ ಕವಿಯ ಮನಸು / ವಿಪುಲ ರೂಪ ಧಾರಿಣಿ / ಬ್ರಹ್ಮನೆದೆಯ ಕನಸಿನಂತೆ / ಕೋಟಿ ಕಲ್ಪ ಗಾಮಿನಿ' –ಕವಿ ಜಿ.ಎಸ್. ಶಿವರುದ್ರಪ್ಪನವರ 'ಕವಿಯ ಮನಸು' ಕವಿತೆಯ ಈ ಸಾಲುಗಳು ಸೂಚಿಸುವುದು ಏನನ್ನು? ಮೇಲ್ನೋಟಕ್ಕೆ ಕವಿಯ ಸೃಜನಶೀಲ ಶಕ್ತಿಯನ್ನೂ ಕಲ್ಪನಾವಿಲಾಸವನ್ನೂ ಕವಿತೆ ಸೂಚಿಸುವಂತೆ ಕಾಣಿಸುತ್ತಿದ್ದರೂ, ಬ್ರಹ್ಮನ ಸೃಷ್ಟಿಶೀಲತೆಗೂ ಕಾವ್ಯಕರ್ಮಕ್ಕೂ ತಳಕು ಹಾಕುತ್ತಿದ್ದರೂ, ಈ ಕವಿತೆ ಕಲ್ಪನಾಶಕ್ತಿಯಾಚೆಗೆ ಬೇರೆ ಏನನ್ನೋ ಸೂಚಿಸುವಂತೆ ಕಾಣಿಸುತ್ತಿದೆ. ಪ್ರಕೃತಿಯ ವೈವಿಧ್ಯದೊಂದಿಗೆ ಕವಿಮನಸ್ಸನ್ನು ಕಲ್ಪಿಸಿಕೊಂಡರೆ, ಕವಿಯ ಜಾಗದಲ್ಲಿ ಸಾಮಾನ್ಯ ಮನುಷ್ಯನನ್ನು ಇರಿಸಿ ನೋಡಿದರೆ ಕವಿತೆ ಮತ್ತೊಂದು ಸಾಧ್ಯತೆಯನ್ನು ಬಿಟ್ಟುಕೊಡುತ್ತದೆ.

ಪ್ರಕೃತಿ ಎಂದರೆ ಏನು? ಅದು ಕಾಡೂ ಹೌದು, ಕಾಡುವಿಕೆಯೂ ಹೌದು. ಬೆಟ್ಟವೂ ಹೌದು, ಬಯಲೂ ಹೌದು. ಹಳ್ಳವೂ ಕೊಳ್ಳವೂ ನದಿಯೂ ಸಾಗರವೂ ಎಲ್ಲವೂ ಹೌದು. ಮರುಭೂಮಿಯೂ ಪ್ರಕೃತಿಯ ಭಾಗವೇ. ಪ್ರಕೃತಿ ಸಂಪತ್ತೆನ್ನುವುದು, ಪ್ರಾಕೃತಿಕ ವೈವಿಧ್ಯ ಎನ್ನುವುದು ಕಾಡಿನಲ್ಲಿ, ಸಮುದ್ರದಲ್ಲಿ ಇರುವಂತೆ ಮರಳುಗಾಡಿನಲ್ಲೂ ಇರಬಲ್ಲದು. ಹಸಿರು ಮತ್ತು ಬಂಜರು ವಿರೋಧಾಭಾಸದಂತೆ ಕಾಣಿಸಿದರೂ, ಅವು ಪ್ರಕೃತಿಯ ಎರಡು ಮುಖಗಳಷ್ಟೆ. ಮನಸ್ಸೂ ಅಷ್ಟೇ. ಪ್ರಕೃತಿಯ ಏರುಪೇರು, ಕಣಿವೆ ಕೊರಕಲು, ಕಾನನ ಹೊನಲು – ಇವೆಲ್ಲವೂ ಮನಸ್ಸಿನ ಸ್ಥಿತಿಯೂ ಹೌದು. ಸೂಕ್ಷ್ಮವಾಗಿ ನೋಡಿದರೆ, ಕಾಡು ಕಣಿವೆ ಹಳ್ಳ ದಿಟ್ಟುಗಳಂತಹ ಪ್ರಕೃತಿಯ ಮುಖಗಳಿವೆಲ್ಲ – ಅವೆಲ್ಲವೂ ನಮ್ಮ ಭಾವಕೋಶದ ಲಕ್ಷಣಗಳೂ ಹೌದಲ್ಲವೆ? ನಮ್ಮ ಮನಸ್ಸು ಕುಗ್ಗಬಲ್ಲದು, ಹಿಗ್ಗಬಲ್ಲದು; ಚಂಚಲಗೊಂಡಂತೆ ಸಮಚಿತ್ತವನ್ನೂ ಸಾಧಿಸಬಲ್ಲದು.

ಕವಿಯ ಮನಸ್ಸನ್ನು ಜಿಎಸ್ಎಸ್, ರತ್ನಗರ್ಭದ ಕಡಲಾಗಿಯೂ ಯುಗಯುಗಗಳ ನಶ್ವರಕ್ಕೆ ದೊರೆತ ಅಮೃತಕವಚದಂತೆಯೂ ಚಿತ್ರಿಸುತ್ತಾರೆ. ಭಾವಮೇಘಗಳಿಂದ ಕೂಡಿದ ಬಾನಿನಂತೆಯೂ ಬೆಂದ ಬುವಿಯ ಹಸುರಿನೆದೆಗೆ ಸುರಿವ ವರ್ಷ ರೂಪಿಣಿಯಾಗಿಯೂ ಕವಿಯ ಮನಸ್ಸು ಕವಿಗೆ ಕಾಣಿಸಿದೆ. ಈ ವಿಲಾಸ ಹಾಗೂ 'ಮನುಷ್ಯ ಪ್ರಕೃತಿಯ ಕೂಸು' ಎನ್ನುವ ಹಿರಿಯರ ತಿಳಿವಳಿಕೆಗೂ ಸಂಬಂಧವಿದೆಯೆ? ಹೌದೆನ್ನಿಸುತ್ತದೆ. ಪ್ರಕೃತಿಯ ಕುರಿತ ಮಾತೆಲ್ಲವೂ ಮನುಷ್ಯನ ಕುರಿತ ಮಾತೇ ಹೌದು.

ಪ್ರಕೃತಿ ಮತ್ತು ಮನಸ್ಸಿನ ಬಗ್ಗೆ ಬೆರಗಿನಿಂದ, ಪುಲಕದಿಂದ ಮಾತನಾಡುವ ನಾವು ಪ್ರಕೃತಿಯ ಸ್ವರೂಪ ಏಕರೂಪವಾಗಿ ಇಲ್ಲದಿರುವುದನ್ನು ಗಮನಿಸಬೇಕು. ಯೋಚಿಸಿ ನೋಡಿ. ಕಾಡಿನಲ್ಲಿ ಒಂದೇ ಬಗೆಯ ಮರಗಳು ಇರುವಂತಾಗಿದ್ದರೆ ಹೇಗಿರುತ್ತಿತ್ತು? ಪ್ರಾಣಿವೈವಿಧ್ಯ ಇಲ್ಲವಾಗಿ ಒಂದೇ ಪ್ರಭೇದದ ಪ್ರಾಣಿಗಳು ಇರುವಂತಾಗಿದ್ದಲ್ಲಿ ಹೇಗಿರುತ್ತಿತ್ತು? ಕಲ್ಲು ಕೊರಕಲು ಇಲ್ಲದೆ ಸಮತಟ್ಟು ಪಾತಳಿಯಿಂದ ಕೂಡಿದ ನದಿ ಪಾತ್ರ ಇರುವುದು ಸಾಧ್ಯವೆ? ಅಲೆಗಳ ಸ್ವರೂಪ ಏಕರೂಪವಾಗಿದ್ದರೂ ಕಡಲಿನ ಆಳ ಒಂದೇ ಬಗೆಯಾಗಿರುವುದು ಸಾಧ್ಯವೆ? ಒಂದೇ ಮರದ ಹಣ್ಣುಗಳು ಕೂಡ ಅಳತೆ ಮಾಡಿದಂತೆ ಒಂದೇ ಗಾತ್ರ ಹಾಗೂ ರುಚಿ ಹೊಂದಿರುವುದಿಲ್ಲ. ಅಡಿಗಡಿಗೂ ಭಿನ್ನವಾಗಿರುವ ಕಾರಣದಿಂದಲೇ ಪ್ರಕೃತಿ ಬೆರಗು ಹುಟ್ಟಿಸುವ ಶಕ್ತಿಯನ್ನು ಉಳಿಸಿಕೊಂಡಿದೆ. ಮನಸ್ಸನ್ನಾದರೂ ಒಂದು ಮಟ್ಟಕ್ಕೆ ಓದಬಹುದು; ಪ್ರಕೃತಿಯನ್ನು ಓದುತ್ತೇವೆನ್ನುವುದು ಸಮುದ್ರವನ್ನು ಬೊಗಸೆಯಲ್ಲಿ ತುಂಬಿಕೊಳ್ಳುವ ಪ್ರಯತ್ನವೇ ಸರಿ.

ಪ್ರಕೃತಿಯ ಚೆಲುವಿರುವುದು ಹಾಗೂ ಜೀವಶಕ್ತಿ ಇರುವುದು ಅದರ ವೈವಿಧ್ಯದಲ್ಲಿ. ಅಂದರೆ, ಏಕರೂಪ ಸಿದ್ಧಾಂತಕ್ಕೆ ಪ್ರಕೃತಿಯಲ್ಲಿ ಅವಕಾಶವಿಲ್ಲ. ಪ್ರಕೃತಿಯಲ್ಲಿ ಅವಕಾಶವಿಲ್ಲ ಎಂದಮೇಲೆ ಮನುಷ್ಯನ ಬದುಕು ಏಕರೂಪದ ಅಚ್ಚಿನಂತಿರುವುದು ಸಾಧ್ಯವೆ? ನಮ್ಮ ಸಮಾಜ ಕೂಡ ಪ್ರಕೃತಿಯ ಪ್ರತಿಕೃತಿಯಂತೆ ಹಲವು ಬಣ್ಣದ, ಗುಣದ, ಆಕಾರದ ಮನುಷ್ಯರನ್ನು ಹೊಂದಿದೆ. ಯಂತ್ರಮಾನವರಷ್ಟೇ ಏಕರೂಪದಲ್ಲಿರಬಹುದೇ ಹೊರತು ಮೂಳೆಮಾಂಸದ ಮನುಷ್ಯರಲ್ಲ.

ವೈವಿಧ್ಯ ವರ್ಣತಂತುಗಳಲ್ಲೇ ಇದ್ದರೂ ಏಕರೂಪದ ಹಂಬಲ ಇತ್ತೀಚಿನ ದಿನಗಳಲ್ಲಿ ಮನುಷ್ಯನನ್ನು ಹೊಕ್ಕಂತೆ ಕಾಣಿಸುತ್ತದೆ. ಇದು ಯಂತ್ರ ನಾಗರಿಕತೆ ನಮ್ಮ ಮೇಲೆ ಸಾಧಿಸಿರುವ ಪ್ರಭಾವದ ಪರಿಣಾಮ. ಅಚ್ಚಿನಲ್ಲಿ ಎರಕಹೊಯ್ದ ಸಲಕರಣೆಗಳು ನಮ್ಮ ಮನೆಗಳನ್ನು ತುಂಬುತ್ತಿವೆ. ಸರಕುಸಂಸ್ಕೃತಿಯಲ್ಲಿನ ಏಕರೂಪತೆ ಅಂತಹ ಸಮಸ್ಯೆಯೇನಲ್ಲ. ಆದರೆ, ಸಮಾಜದ ಸದಸ್ಯರಲ್ಲಿ ಏಕರೂಪವನ್ನು ಕಾಣಲು ಹೊರಡುವುದು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಸಮಾಜ ಒಂದೇ ಬಗೆಯ ಆಚಾರ ವಿಚಾರಗಳಿಂದ ಕೂಡಿರಬೇಕೆಂದು ಬಯಸುವುದು ಪ್ರಕೃತಿಯ ಬಹುತ್ವದ ತಾತ್ವಿಕತೆಗೆ ವಿರುದ್ಧವಾದುದು.

ಬುಲ್ಡೋಜರ್ ಏಕರೂಪ ಸಂಸ್ಕೃತಿಯ ಬಹುದೊಡ್ಡ ಪ್ರತೀಕ. ಹೆಸರಿನಿಂದ ಮಾತ್ರವಲ್ಲದೆ, ಗಾತ್ರದಿಂದಲೂ ಕೆಲಸದಿಂದಲೂ ಆತಂಕ ಹುಟ್ಟಿಸುವ ಈ ರಕ್ಕಸಯಂತ್ರದ ಗಾಲಿಗಳು ಮತ್ತು ಹಲ್ಲುಗಳು ತಮ್ಮಳತೆಗೆ ಸಿಕ್ಕಿದ್ದೆಲ್ಲವನ್ನೂ ಹುಡಿಗಟ್ಟಿ ಸಮತಟ್ಟಾಗಿಸುತ್ತವೆ. ಬುಲ್ಡೋಜರ್ ಜೊತೆಗೆ ವಿಧ್ವಂಸಕ ಕೃತ್ಯಗಳು ನೆನಪಾಗುವುದೇ ಹೆಚ್ಚು. ಹಾಗೆಂದು, ನಾಗರಿಕ ಸಮಾಜದಲ್ಲಿ ಬುಲ್ಡೋಜರ್ ಅನ್ನು ನಿರಾಕರಿಸುವುದು ಸಾಧ್ಯವಿಲ್ಲ. ಆದರೆ, ಅದನ್ನು ಎಲ್ಲಿ ಯಾವಾಗ ಯಾವುದಕ್ಕೆ ಬಳಸಬೇಕು ಎನ್ನುವ ವಿವೇಕ ಅಗತ್ಯ. ಬುಲ್ಡೋಜರ್ ಬಳಸುವ ಕೈಗಳಿಗೆ ಮತ್ತು ಮನಸ್ಸಿಗೆ ಹೊಸತನ್ನು ಕಟ್ಟುವ ಶಕ್ತಿ ಇಲ್ಲದೆ ಹೋದರೆ, ಭಸ್ಮಾಸುರ ಸಂತತಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಬುಲ್ಡೋಜರ್ ಮೊದಲು ನುಗ್ಗಿಸಬೇಕಾದುದು ಇಟ್ಟಿಗೆ ಸಿಮೆಂಟಿನ ರಚನೆಗಳ ಮೇಲಲ್ಲ. ಅದು ಓಡಬೇಕಾದುದು ನಮ್ಮೊಳಗೆ. ನಮ್ಮ ಮನಸ್ಸಿನಲ್ಲಿ ಬೆಳೆದುನಿಂತ ಕಳೆಗಳನ್ನೂ ಕೊಳಕನ್ನೂ ಬುಲ್ಡೋಜರ್‌ಗೆ ಒಪ್ಪಿಸಬೇಕು. ವಿಕಾರಗಳನ್ನು ಕಳೆದುಕೊಂಡು ಹದಗೊಂಡ ಮನಸ್ಸಿನ ಮಣ್ಣಿನೊಳಗೆ ಹಸುರು ಅರಳಬೇಕು, ಹೊನಲು ಹರಿಯಬೇಕು. ಕಣಿವೆಗಳು ಸೃಷ್ಟಿಯಾಗಬೇಕು. ಹಕ್ಕಿಗಳ ಕುಕಿಲು ಮಾರ್ದನಿಗೊಳ್ಳಬೇಕು. ಪ್ರಕೃತಿಯ ಬಹುತ್ವವನ್ನು ಮೈಗೂಡಿಸಿಕೊಳ್ಳದೆ ಹೋದರೆ ಮನುಷ್ಯಜೀವನಕ್ಕೆ ಅರ್ಥವಿಲ್ಲ.

■ **ಮಹತಿ**

## ಮಾತೇ ಮುತ್ತು

- ಸಾಯುವುದು ಸುಲಭ, ಬಾಳುವುದು ದೊಡ್ಡ ಹೊಣೆಗಾರಿಕೆ.

  –ಎಸ್.ವಿ. ರಂಗಣ್ಣ
- ನಾವೇನು ಯೋಚಿಸುತ್ತೇವೆ, ತಿಳಿದುಕೊಂಡಿದ್ದೇವೆ ಅಥವಾ ನಂಬಿದ್ದೇವೆ – ಎಲ್ಲವೂ ಕೊನೆಯಲ್ಲಿ ಬೀರುವ ಪರಿಣಾಮ ಅಷ್ಟಕ್ಕಷ್ಟೆ. ನಾವೇನು ಮಾಡಿದ್ದೇವೆ ಎನ್ನುವುದಷ್ಟೇ ಪರಿಣಾಮ ಬೀರುವುದು.

  –ಜಾನ್ ರಸ್ಕಿನ್
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.

  –ಸಿ.ವಿ. ರಾಮನ್
- ಶ್ರಮಜೀವಿಯಂತೆ ಕೆಲಸ ಮಾಡು .ವೇದಾಂತಿಯಂತೆ ಯೋಚಿಸು.

  –ಹೆನ್ರಿ ಬರ್ಗ್
- ನಮ್ಮ ಗುಣಗಳ ನೆರಳೇ ನಮ್ಮ ಲೋಕಗಳು.

  –ಎಮರ್ಸನ್
- ಲೋಕವೆಂಬುದೊಂದು ಸಂತೆ, ಬೇಕು ಬೇಡಗಳ ಕಂತೆ, ಸಾಕು ನಮಗಾ ಚಿಂತೆ.

  –ಡಿ.ವಿ. ಗುಂಡಪ್ಪ
- ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.

  –ಮಹಾತ್ಮ ಗಾಂಧಿ
- ನಿಮ್ಮ ಮುಖವನ್ನು ಯಾವತ್ತೂ ಸೂರ್ಯನಿಗೆ ಅಭಿಮುಖವಾಗಿಟ್ಟುಕೊಳ್ಳಿ. ನೆರಳು ಹಿಂದಕ್ಕೆ ಸರಿಯುತ್ತದೆ.

  –ವಾಲ್ಟ್ ವಿಟ್ಮನ್
- ನಮ್ಮ ಧರ್ಮಗಳು ನಮಗೆ ಕೂಡಿ ಬಾಳಲು ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?

  –ಸಿದ್ದೇಶ್ವರ ಸ್ವಾಮೀಜಿ
- ಮಹಾ ಕಾರ್ಯಗಳು ಮಹಾ ತ್ಯಾಗದಿಂದ ಮಾತ್ರ ಸಾಧ್ಯ.

  –ಸ್ವಾಮಿ ವಿವೇಕಾನಂದ